ರುಚಿಯಾದ, ಸರಳವಾದ ಕೈಯಡಿಗೆ, ಆಯಾಸದಲ್ಲೂ ಆದರ ತೋರುತ್ತಿದ್ದ ಆತಿಥ್ಯ ನನಗೆ ಬಹಳಷ್ಟು ಸಿಕ್ಕಿದೆ.

ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯನಿಮಿತ್ತ ನಾನು ಅಡಿಗಡಿಗೆ ಹೈದರಾಬಾದಿಗೆ ಹೋಗಿ ಬರುತ್ತಿದ್ದೆ. ಪ್ರತಿ ಸಲ ಹೋದಾಗಲೂ ತಪ್ಪದೆ ನಮ್ಮ ಭೆಟ್ಟಿಯಾಗುತ್ತಿತ್ತು. ಕ್ರಮೇಣ ಜೊತೆಯಲ್ಲಿ ಹೆಚ್ಚು ಕಾಲ ಕಳೆಯುವ ಸಲುವಾಗಿ ಅವರ ಸಂಸ್ಥೆಯ ಅತಿಥಿ ಗೃಹದಲ್ಲೇ ಉಳಿಯುತ್ತಿದ್ದೆ. ಅದಕ್ಕೆ ಮತ್ತೊಂದು ಕಾರಣ, ಅವರ ಮನೆ ಕ್ಯಾಂಪಸ್ಸಿನಲ್ಲೇ ಇದ್ದದ್ದು. ನಮ್ಮ ಭೆಟ್ಟಿಗಳ ನಡುವಿನ ಅಂತರದಲ್ಲಿ ಅವರು ಹೊಸದಾಗಿ ಬರೆದ ಕವಿತೆಗಳನ್ನು ಓದುತ್ತಿದ್ದರು, ಹೊಸದಾಗಿ ಓದಿದ ಪುಸ್ತಕಗಳ ಬಗ್ಗೆ, ನಾನು ಓದಲೇಬೇಕಾದ ಪುಸ್ತಕಗಳ ಬಗ್ಗೆ ಹೇಳುತ್ತಿದ್ದರು. ಮೇರಿ ಮೆಕಾರ್ಥಿಯ 'ಓಯೆಸಿಸ್', ಮಿಲಾನ್ ಕುಂದೇರನ 'ಹಿಚ್ ಹೈಕಿಂಗ್' ಮುಂತಾದ ಕಥೆಗಳನ್ನ ಇಡಿಇಡಿಯಾಗಿ ನಿರೂಪಿಸಿ, ಅಂಥ ಹಲವು ಲೇಖಕರನ್ನು ನಾನು ಓದುವಂತೆ ಮಾಡಿದವರು ಅವರು. ಓದಿನ ಬಾಬತ್ತಿನಲ್ಲಿ ಅವರು ಥೇಟ್ ಒಂದು ಆಡು! ಇಂಥದೇ ವಿಷಯವೆಂಬುದಿರಲಿಲ್ಲ. ಓದಿದ್ದನ್ನು ಹಂಚಿಕೊಳ್ಳುವುದರಲ್ಲಿ ಅವರಿಗೆ ಅಪಾರ ಆಸಕ್ತಿ. ಅದನ್ನು ನಾವು ಅವರ ಕಾವ್ಯದಲ್ಲೂ, ಗದ್ಯ ಬರಹಗಳಲ್ಲೂ ಯಥೇಚ್ಛವಾಗಿ ಕಾಣಬಹುದು. ತಾವು ಓದಿದ್ದು, ಅಧ್ಯಯನ ಮಾಡಿದ್ದು ಕನ್ನಡಕ್ಕೆ ದಕ್ಕಬೇಕೆಂಬುದು ಅವರ ಅಂತರಾಳದ ಸಂಗತಿಯಾಗಿತ್ತು ('ಆಳ-ನಿರಾಳ' 1,2,3 ಅವರ ಅಂಕಣ ಸಂಪುಟಗಳು). ಅದನ್ನು ಅವರು ಶಕ್ತಿಮೀರಿ ಮಾಡಿದರು. ಅವರಿಗೆ ವಾದ ವಿವಾದ, ಜಗಳಗಳೆಂದರೆ ಆಗುತ್ತಿರಲಿಲ್ಲ. ರಾಜಕೀಯ ಸಿದ್ಧಾಂತಗಳ ಬಗ್ಗೆ ಆಳದ ತಿಳಿವು ಇದ್ದರೂ ಸಮಕಾಲೀನ ಪಕ್ಷರಾಜಕಾರಣದ ಚರ್ಚೆಗಳಿಂದ ದೂರವಿರುತ್ತಿದ್ದರು. ಆದರೆ, ತಮ್ಮ ನಿಲುವಿಗೆ ಬದ್ಧರಾಗಿರುತ್ತಿದ್ದರು. ರಾಜಕೀಯವೆಂದ ಕೂಡಲೆ ಪಕ್ಷಪಾತ, ಭಿನ್ನಾಭಿಪ್ರಾಯ ವಿವಾದ ಅನಿವಾರ್ಯವೆನಿಸುತ್ತಿತ್ತು ಅವರಿಗೆ.

ಮಕ್ಕಳಿಗಾಗಿ ಅವರು ಅತ್ಯುತ್ತಮ ಪ್ರಾಸಗಳನ್ನು, ಕವಿತೆಗಳನ್ನು ರಚಿಸಿದರು. ಅಲ್ಲಿಯೂ ಸಹ ಭಾಷಿಕ ಪ್ರಯೋಗಗಳನ್ನು ಮನಮುಟ್ಟುವಂತೆ ಮಾಡಿದರು. ಮಕ್ಕಳ ಮಾತೆಂದರೆ ಒಂದು ಸಂದರ್ಭ ನೆನಪಾಗುತ್ತದೆ. ಅವರ ಮನೆಗೆ ಹೋಗುವಾಗ ಮನೆಯ ಮೆಟ್ಟಿಲುಗಳಲ್ಲಿ ಅವರ ಮಕ್ಕಳು ನೆರೆಮನೆಗಳ ಇಬ್ಬರು ಮೂವರು ಮಕ್ಕಳೊಂದಿಗೆ ಆಟವಾಡುತ್ತಿದ್ದರು. ಆ ನೆರೆಮನೆಯ ಮಕ್ಕಳನ್ನು ಕಂಡ ಕೂಡಲೆ ತಿರುಮಲೇಶ್ ಎತ್ತರಿಸಿದ ದನಿಯಲ್ಲಿ, 'ಔಟ್... ಔಟ್...' ಎಂದು ಕೂಗುತ್ತ ಆ ಮಕ್ಕಳು ಕಣ್ಮರೆಯಾಗುವವರೆಗೆ ನಿಂತಲ್ಲೇ ನಿಂತುಬಿಟ್ಟರು. ನನಗೆ ಸ್ವಲ್ಪ ಗಾಬರಿಯೇ ಆಯಿತು. ತಿರುಮಲೇಶರ ಮಕ್ಕಳೂ ಭಯಭೀತರಾಗಿ ನಿಂತಿದ್ದರು. ಅವರ ಸ್ವಭಾವಕ್ಕೆ ಸಂಪೂರ್ಣ ವಿರುದ್ಧವಾಗಿ ವರ್ತಿಸಿದ ಅವರನ್ನು ಮೆಟ್ಟಿಲೇರುತ್ತಿದ್ದಾಗ, 'ಯಾಕೆ ಇಷ್ಟೊಂದು ಕೋಪ ಮಾಡಿದಿರಿ?' ಎಂದು ಕೇಳಿದೆ. ಒಂದೆರಡು ಮಾತುಗಳಲ್ಲಿ ವಿವರಿಸಿದಾಗ ತಿಳಿಯಿತು. ಅವರ ಕೋಪವಿದ್ದದ್ದು ಮಕ್ಕಳ ಮೇಲಲ್ಲ, ಅವರ ಕೈಗಳಲ್ಲಿದ್ದ ಆಟಿಕೆಗಳ ಮೇಲಿತ್ತು! ಮತ್ತು ಆ ಆಟಿಕೆಗಳನ್ನು ಮಕ್ಕಳಿಗೆ ಕೊಂಡುಕೊಡುವ ಅವರ ಅಪ್ಪಅಮ್ಮಂದಿರ ಮೇಲಿತ್ತು! ಅವು ದೊಡ್ಡದೊಡ್ಡ ಮೆಷಿನ್ ಗನ್ನುಗಳಾಗಿದ್ದವು. ಅವರ ಅಕ್ಕಪಕ್ಕದ ಮನೆಗಳಲ್ಲಿದ್ದವರೂ ಪ್ರೊಫೆಸರುಗಳೇ. ತಿರುಮಲೇಶ್ ಗೊಣಗುತ್ತ 'ಈ ವಿದ್ಯಾವಂತ ಮೂರ್ಖರಿಗೆ ಮಾರ್ಕೆಟ್ಟಲ್ಲಿ ಬೇರೆ ಯಾವ ಗೊಂಬೆಗಳೂ ಸಿಕ್ಕಲ್ಲ' (ಮಕ್ಕಳ ಆಟಿಕೆಯ ಬೊಂಬೆಗಳನ್ನು ಕುರಿತ ಅವರ ಪದ್ಯಗಳು ನೆನಪಾಗುತ್ತವೆ) ಅನ್ನುತ್ತಾ, 'ನಿರ್ಮಲಾ, ಕೃಷ್ಣಮೂರ್ತಿ ಬಂದಿದಾರೆ, ಒಂದು ರವಾ ಮಾಡಿಬಿಡು,' ಎಂದು ಮಾಮೂಲಿ ಪ್ರಸನ್ನತೆಗೆ ಬಂದರು. ಅವರ ರವಾ ಅಂದರೆ ನಮ್ಮ ಉಪ್ಪಿಟ್ಟು! ಅವರು ಅದಕ್ಕಷ್ಟು ಸಕ್ಕರೆ ಬೆರಸಿ ತಿನ್ನುತ್ತಿದ್ದರು!

ತಿರುಮಲೇಶ್ 12.10.1995ರಲ್ಲಿ ಬರೆದ ಒಂದು ಪತ್ರ ಹೀಗಿದೆ:

"ಪ್ರಿಯ ಕೃಷ್ಣಮೂರ್ತಿ; ಲಂಕೇಶ್ ಪತ್ರಿಕೆ ನನಗಿನ್ನೂ ಬಂದಿಲ್ಲ. ಬಸವರಾಜ್‌ಗೆ ಬರೆದಿದ್ದೆ. ನನ್ನ ಪ್ರಕಟಿತ ಪದ್ಯದ ಕಟಿಂಗ್ ಸಿಕ್ಕರೂ ಸಾಕು. ನೀವೂ ನೋಡಿದ್ದೆ ಅಂದಿದೀರ. ಮುಂಬಯಿಯ ಮಿತ್ರರೊಬ್ಬರು ಈ ಪದ್ಯ ಮೆಚ್ಚಿ ನನಗೆ ಬರೆದ ನಂತರ ಇದನ್ನ ಓದುವ ಕುತೂಹಲ ನನಗೂ ಇದೆ(!). ದಯವಿಟ್ಟು ಕಳಿಸಲು ಇನ್‌ಫ್ಲುಯೆನ್ಸ್ ಮಾಡಿ. ಅದೇ ತರ ಕನ್ನಡಪ್ರಭದಲ್ಲಿ ನನ್ನ ಪದ್ಯ ಯಾವುದಾದರೂ ಬಂದರೆ ಒಂದು ಕಟಿಂಗ್ ಕಳಿಸಿ – ಕರ್ನಾಟಕದ ಮಿತ್ರರಿಂದ ಇದಕ್ಕಿಂತ ಹೆಚ್ಚಿನದೇನನ್ನೂ ನಾನು ಕೋರುವುದಿಲ್ಲ!

ಪದ್ಯ ಬರೆಯುವ ಕ್ರಿಯೆ ನನ್ನಲ್ಲಿ ಇನ್ನೂ ಜೀವಂತ